ವಿಶ್ವವಾಣಿ

ಸಂಪಾದಕೀಯ

ಬಿಲ್‌ಬೋರ್ಡ್‌ಗಳ ಬಗ್ಗೆ ಎಚ್ಚರ ಇರಲಿ

ಮಹಾರಾಷ್ಟ್ರ ರಾಜಧಾನಿ, ದೇಶದ ವಾಣಿಜ್ಯ ನಗರಿ ಮುಂಬೈನಲ್ಲಿ ಸೋಮವಾರ ಸುರಿದ ಬಿರುಗಾಳಿ ಮಳೆಯಿಂದಾಗಿ ಬಿಲ್‌ಬೋರ್ಡ್‌ವೊಂದು ಬಿದ್ದು 14 ಮಂದಿ ಸಾವಿಗೆ ಕಾರಣವಾಗಿದೆ. ಮಧ್ಯಾಹ್ನ ದಿಢೀರನೇ ಧೂಳಿನಿಂದ ಕೂಡಿದ ಬಿರುಗಾಳಿಯಿಂದ ಆರಂಭವಾದ ಮಳೆಯು ಅಪಾರ ಪ್ರಮಾಣದ ಹಾನಿ ಸೃಷ್ಟಿಸಿದೆ. ಮುಂಬೈನಲ್ಲಿ ಇದು ಮೊದಲ ಮಳೆಯಾಗಿದ್ದು, ಇಡೀ ನಗರವನ್ನೇ ಆತಂಕಕ್ಕೆ ದೂಡಿದ್ದು ಸುಳ್ಳಲ್ಲ. ಇದರ ಮಧ್ಯೆಯೇ, ಘಾಟ್ ಕೋಪರ್ ಎಂಬ ಪ್ರದೇಶದಲ್ಲಿ ಅತ್ಯಂತ ದೊಡ್ಡ ಬಿಲ್‌ಬೋರ್ಡ್ ಬಿದ್ದು, 14 ಮಂದಿ ಸಾವು, 50ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಸಾಮಾನ್ಯವಾಗಿ ದೊಡ್ಡ ದೊಡ್ಡ ಬಿಲ್‌ಬೋರ್ಡ್‌ಗಳನ್ನು ಅತ್ಯಂತ ಎಚ್ಚರಿಕೆಯಲ್ಲೇ ನಿರ್ಮಾಣ ಮಾಡಲಾಗಿರುತ್ತದೆ. ಇವು ಎಂಥದ್ದೇ ಬಿರುಗಾಳಿಯನ್ನೂ ತಡೆಯಬಹುದಾದ ಸಾಮರ್ಥ್ಯ ಹೊಂದಿರುತ್ತವೆ. ಆದರೆ, ಮುಂಬೈನಲ್ಲಿ ಈ ಬಿಲ್‌ಬೋರ್ಡ್ ಹೇಗೆ ಬಿತ್ತು ಎಂಬುದೇ ಸಂಶಯಕ್ಕೆ ಕಾರಣವಾಗಿದೆ. ವಿಚಿತ್ರವೆಂದರೆ, ಈ ಬಿಲ್‌ಬೋರ್ಡ್‌ನ ಮಾಲೀಕನ ವಿರುದ್ಧ ಅಕ್ರಮವಾಗಿ ಬಿಲ್‌ಬೋರ್ಡ್ ಅಳವಡಿಸಿರುವ 21 ಪ್ರಕರಣಗಳಿವೆ. ಆದರೂ, ವ್ಯವಸ್ಥೆಯ ಲೋಪದಿಂದ ಈತ ಬೇರೆ ಬೇರೆ ಪ್ರದೇಶಗಳಲ್ಲಿ ಇಂಥ ಬಿಲ್‌ಬೋರ್ಡ್‌ಗಳನ್ನು ಹಾಕಿಕೊಂಡೇ ಬಂದಿದ್ದಾನೆ. ಈಗ ಈತನ ತಪ್ಪಿಗೆ ಏನೂ ಅರಿಯದ 14 ಮಂದಿ ಪ್ರಾಣ ತೆತ್ತಿದ್ದಾರೆ. ಒಂದು ಲೆಕ್ಕಾಚಾರದಲ್ಲಿ ನೋಡುವುದಾದರೆ ಇದಕ್ಕೆ ಮುಂಬೈನ ಮಹಾನಗರ ಪಾಲಿಕೆಯೇ ಕಾರಣ ಎಂದು ಹೇಳಬೇಕಾಗುತ್ತದೆ. ಇದು ಕೇವಲ ಮುಂಬೈನಂಥ ನಗರಗಳಿಗೆ ಮಾತ್ರ ಸೀಮಿತವಾಗಲ್ಲ. ಇಂಥ ಬಿಲ್‌ಬೋರ್ಡ್‌ಗಳು ಎಲ್ಲ ನಗರಗಳಲ್ಲೂ ಕಾಣಸಿಗುತ್ತವೆ. ಬೆಂಗಳೂರಿನಂಥ ಮಹಾನಗರಗಳಲ್ಲಿಯೂ ಜಾಹೀರಾತು ನೀಡುವ ಉದ್ದೇಶದಿಂದ ಬಿಲ್‌ಬೋರ್ಡ್‌ಗಳನ್ನು ಹಾಕಲಾಗಿರುತ್ತದೆ. ಮುಂಬೈನಲ್ಲಿನ ಪ್ರಕರಣವನ್ನು ಮುಂದಿಟ್ಟುಕೊಂಡು ಇಲ್ಲಿಯೂ ಮಹಾನಗರ ಪಾಲಿಕೆ ಅಧಿಕಾರಿಗಳು ಬಿಲ್‌ಬೋರ್ಡ್‌ಗಳ ಸ್ಥಿತಿಗತಿ ಬಗ್ಗೆ ಅಧ್ಯಯನ ಮಾಡಬೇಕು. ಯಾರಾದರೂ ಅಕ್ರಮವಾಗಿ ಅಳವಡಿಕೆ ಮಾಡಿದ್ದರೆ ಅಂಥವುಗಳನ್ನು ತೆರವು ಮಾಡುವ ಕೆಲಸ ಮಾಡಬೇಕು. ಈಗಷ್ಟೇ ಮಳೆಗಾಲ ಆರಂಭವಾಗಿದ್ದು, ಬೆಂಗಳೂರಿನಲ್ಲೂ ಗಾಳಿ ಮಳೆ ಹೆಚ್ಚಾಗಿದೆ. ಎಲ್ಲಿಯೂ ಮಳೆ ಸಂಬಂಧಿ ಅನಾಹುತಗಳು ಆಗದಂತೆ ತಡೆಗಟ್ಟುವ ನಿಟ್ಟಿನಲ್ಲಿ ಮಹಾನಗರ ಪಾಲಿಕೆ ಎಚ್ಚರಿಕೆ ವಹಿಸಬೇಕು. ಜತೆಗೆ, ಮಳೆಯಿಂದಾಗಿ ಮರಗಳು ಬೀಳುವುದು ಸಾಮಾನ್ಯವಾಗಿದ್ದು ಈ ನಿಟ್ಟಿನಲ್ಲಿ ಪರಿಶೀಲನೆ ಮಾಡಬೇಕು. ರಸ್ತೆಯತ್ತ ಹೆಚ್ಚು ವಾಲಿರುವ ಅಥವಾ ಬೀಳಬಹುದಾದ ಮರಗಳ ತೆರವು ಮಾಡುವತ್ತಲೂ ಚಿಂತನೆ ನಡೆಸಬೇಕು.

ಸೊಂಪಾದಕೀಯ

ಮಗಳು ಮನೆಯಲ್ಲಿಲ್ಲದಿದ್ದರೆ...

ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ನನಗದೆ ಕೋಟಿ ರೂಪಾಯಿ ಅನ್ನೋ ರತ್ನನ ಪದವನ್ನು ನೀವು ಕೇಳಿರುತ್ತೀರಿ. ಆದರೆ ರತ್ನದಂತೆ ಕಾಪಾಡಿಕೊಂಡು ಬಂದಿದ್ದ ಮಗಳು ಮನೆಯಲ್ಲಿ ಇಲ್ಲದಿದ್ದರೆ? ಇದು ಮಗಳು ಮನೆಯಲ್ಲಿ ಇಲ್ಲ ಅನ್ನೋದ್ರ ಜೊತೆಗೆ ಖಜಾನೆಯಲ್ಲಿ ಇಟ್ಟಿದ್ದ ಕೋಟಿ ನಗದೂ ಲೂಟಿ ಆದ ಘಟನೆ. ಹೆಣ್ಣುಮಕ್ಕಳ ವಿಷಯ ಅಂದ್ರೆ ಬಹಳ ಸೂಕ್ಷ್ಮ ಬಿಡಿ. ಅದು ಸಂದರ್ಭಕ್ಕೆ ತಕ್ಕಂತೆ. ಯಾಕಂದ್ರೆ ಇತ್ತೀಚೆಗೆ ನಾವೇನೂ ಕೈಗೆ ಬಳೆ ತೊಟ್ಕೊಂಡಿಲ್ಲ ಅನ್ನೋ ಪಾಕಿಸ್ತಾನದ ಹೇಳಿಕೆಗೆ ಭಾರತದ ಪ್ರಧಾನಿ ಕೂಡಾ, ಬಳೆ ತೊಟ್ಟುಕೊಂಡಿಲ್ಲದಿದ್ದರೆ ಏನಂತೆ ನಾವೇ ತೊಡಿಸುತ್ತೇವೆ ಅಂತ ಹೇಳಿಕೆ ಕೊಟ್ಟಿದ್ದಾರೆ. ಆದರೆ ಸಾಮಾನ್ಯವಾಗಿ ಯಾರಾದರೂ ನಾವು ಕೈಗೆ ಬಳೆ ಕೊಟ್ಟುಕೊಂಡಿಲ್ಲ ಅಂದ್ರೆ, ಸಾಕು, ಫೆಮಿನಿಸ್ಟ್‌ಗಳು ರೊಚ್ಚಿಗೆದ್ದು ಬಿಡುತ್ತಾರೆ. ಆದರೆ ಈ ಬಾರಿ ಪ್ರೈಮ್ ಮಿನಿಸ್ಟರ್ ಮಾತಾಡಿದ್ರೂ, ಯಾಕೋ ಯಾರೂ ಮಾತಾಡದೆ ಸುಮ್ನೆ ಇದ್ದಾರೆ. ಹಾಗಾಗಿ ಹೆಣ್ಣುಮಕ್ಕಳ ಮೂಡ್ ಯಾವಾಗ ಹೆಂಗಿರುತ್ತೋ ಹೇಳೋಕಾಗಲ್ಲ. ಹಾಗೇನೇ ಈ ಹುಡುಗಿ ತನ್ನಿಷ್ಟದ ಹುಡುಗನ ಜತೆ ಓಡಿ ಹೋಗಿ ಮದುವೆ ಆಗಿದ್ದಾಳೆ. ಅಪ್ಪ ಕೇಳಿದ್ದಕ್ಕೆ ಪೊಲೀಸ್ನೋರು, ಅವಳು ವಯಸ್ಸಿಗೆ ಬಂದಿದ್ದಾಳೆ, ನಾವೇನೂ ಮಾಡಕಾಗಲ್ಲ ಅಂದಿದ್ದಾರೆ. ಆದ್ರೆ ಅಪ್ಪನಿಗೆ ಮಗಳು ಕಾಣೆ ಆದಮೇಲೆ ಹೇಜಾರಾದ್ರೂ, ಗಾಬರಿ ಆಗಿದ್ದು ಮಾತ್ರ ತಿಜೋರಿಯಲ್ಲಿ ಇಟ್ಟಿದ್ದ ನಗದೂ ಕಾಣೆಯಾಗಿದೆ ಅಂತ ಗೊತ್ತಾದ ಮೇಲೆ. ಪ್ರಿಯಕರನ ಜೊತೆ ಮದುವೆ ಆಗಿ, ನನಗೆ ಅಪ್ಪನ ಮನೆಗೆ ಹೋಗಲು ಇಷ್ಟ ಇಲ್ಲ, ಗಂಡನ ಜೊತೆನೇ ಪಾಲಿಗೆ ಬಂದಿದ್ದು ಪಂಚಾಮೃತ ಎಂದು ಕೊಂಡು ಬಾಳುತ್ತೇನೆ, ಅಪ್ಪನ ಆಸ್ತಿಯಲ್ಲಿ ಪಾಲನ್ನೂ ಕೇಳಲ್ಲ ಅಂತ ದೊಡ್ಡ ಮಾತಾಡಿದ್ದಳು ಈ ಹುಡುಗಿ. ಆದರೆ ಅಪ್ಪ ಮನೆಯ ತಿಜೋರಿ ನೋಡಿದಾಗಲೇ ಪ್ರಿಯಕರನ ಜೊತೆ ಪರಾರಿಯಾದ ಈ ಚೋರಿ ತನ್ನ ಪಾಲಿನ ಹಣವನ್ನು ತನ್ನ ಮನೆಯಲ್ಲೇ ಚೋರಿ ಮಾಡಿಕೊಂಡು ಹೋಗಿದ್ದಾಳೆ, ಅದಕ್ಕೇ ಅಷ್ಟು ಧೈರ್ಯವಾಗಿ ನನಗೆ ಆಸ್ತಿಯಲ್ಲಿ ಪಾಲು ಬೇಡ ಅಂತ ಹೇಳ್ತಾ ಇದ್ದಿದ್ದು ಅನ್ನೋ ಗುಟ್ಟು ರಟ್ಟಾಗಿದ್ದು. ಪ್ರೀತಿಸಿದ ಹುಡುಗ ಬೇಕು ಅಂತ ಅಪ್ಪನ ಆಸ್ತಿ ಬಿಟ್ಟು ಹೋಗೋ ಹುಡುಗಿಯರ ಮಧ್ಯೆ ಅಪ್ಪನ ದುಡ್ಡನ್ನೇ ಲಪಟಾಯಿಸಿ, ಇಷ್ಟ ಆದವನನ್ನು ಮದುವೆ ಆಗಿ ಎರಡನ್ನೂ ಬ್ಯಾಲೆನ್ಸ್ ಮಾಡಿ ತನ್ನ ಬ್ಯಾಂಕ್ ಬ್ಯಾಲೆನ್ಸ್ ತುಂಬಿಸಿಕೊಂಡಿರುವ ಈ ಹುಡುಗಿ ಮಾತ್ರ ಸದ್ಯಕ್ಕೆ ಟಾಕ್ ಆಫ್ ದಿ ಟೌನ್ .

ಸಂಪಾದಕರ ಸದ್ಯಶೋಧನೆ

ಮೊರಾರ್ಜಿ ಮೊದಲ ಸಂಪುಟ

ಮೊರಾರ್ಜಿ ದೇಸಾಯಿ ನೇತೃತ್ವದಲ್ಲಿ ಜನತಾ ಪಕ್ಷ ಸರಕಾರ ಅಸ್ತಿತ್ವಕ್ಕೆ ಬಂದಿತು. ಸಚಿವ ಸಂಪುಟ ರಚನೆ ಕಾರ್ಯ ಸುಗಮವಾಗಿರಲಿಲ್ಲ. ಚೌಧುರಿ ಚರಣ್ ಸಿಂಗ್ ಅವರಿಗೆ ಗೃಹ ಖಾತೆಯನ್ನು ಕೊಡಲು ಇಷ್ಟವಿರಲಿಲ್ಲ. ಅದನ್ನು ತಾವೇ ಇಟ್ಟುಕೊಂಡರೆ ಹೇಗೆ ಎಂದು ದೇಸಾಯಿ ಯೋಚಿಸಿದ್ದರು. ಹೀರುಭಾಯಿ ಪಟೇಲ್ ಕೂಡ ಗೃಹ ಖಾತೆಯ ಮೇಲೆ ಕಣ್ಣಿಟ್ಟಿದ್ದರು. ಆದರೆ ತಮಗೆ ಆ ಖಾತೆ ಬೇಕೇ ಬೇಕು ಎಂದು ಚರಣ್ ಸಿಂಗ್ ಪಟ್ಟುಹಿಡಿದರು. ವಿದೇಶಾಂಗ ವ್ಯವಹಾರ ಖಾತೆ ಬಗ್ಗೆ ಹೆಚ್ಚಿನ ಪೈಪೋಟಿ ಇರಲಿಲ್ಲ. ಭಾರತೀಯ ಜನಸಂಘದ ನಾಯಕ ಅಟಲ್ ಬಿಹಾರಿ ವಾಜಪೇಯಿ ಕೋರಿಕೆ ಮೇರೆಗೆ ಆ ಖಾತೆಯನ್ನು ಅವರಿಗೇ ನೀಡಲಾಯಿತು. ಹಾಗೇ ಎಲ್.ಕೆ.ಅಡ್ವಾಣಿ ಅವರಿಗೆ ಮಾಹಿತಿ ಮತ್ತು ಪ್ರಸಾರ ಖಾತೆಯನ್ನು ನೀಡಲಾಯಿತು. ಸೋಷಿಯಲಿಸ್ಟ್ ಪಾರ್ಟಿಯ ಜಾರ್ಜ್ ಫರ್ನಾಂಡೀಸ್ ತಮಗೆ ಕೈಗಾರಿಕೆ ಖಾತೆ ನೀಡುವಂತೆ ಮನವಿ ಮಾಡಿಕೊಂಡಿದ್ದರು. ಅದನ್ನು ಪುರಸ್ಕರಿಸಲಾಯಿತು. ಮೊದಲ ಬಾರಿಗೆ ಶಿರೋಮಣಿ ಅಕಾಲಿದಳ ಕೇಂದ್ರ ಸರಕಾರದಲ್ಲಿ ಸ್ಥಾನವನ್ನು ಪಡೆಯಿತು. ಒಂಬತ್ತು ಸ್ಥಾನಗಳನ್ನು ಪಡೆದಿದ್ದ ಆ ಪಕ್ಷದ ಪ್ರಕಾಶ ಸಿಂಗ್ ಬಾದಲ್ ಅವರಿಗೆ ಕೃಷಿ ಖಾತೆಯನ್ನು ನೀಡಲಾಯಿತು. ನಂತರ ಸುರಜಿತ್ ಸಿಂಗ್ ಬರ್ನಾಲಾ ಸಹ ಸಂಪುಟವನ್ನು ಸೇರಿದರು. ಇಂದಿರಾ ಗಾಂಧಿ ಸಂಪುಟದಲ್ಲಿ ರಕ್ಷಣಾ ಖಾತೆ ಸಚಿವರಾಗಿದ್ದ ಬಾಬು ಜಗಜೀವನ್ ರಾಮ್, ಮೊರಾರ್ಜಿ ಸಂಪುಟದಲ್ಲೂ ಅದೇ ಖಾತೆಯನ್ನು ಪಡೆದರು. ಹೇಮಾವತಿ ನಂದನ್ ಬಹುಗುಣ ಅವರಿಗೆ ಪೆಟ್ರೋಲಿಯಂ, ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ನೀಡಲಾಯಿತು. ಸಿಕಂದರ್ ಬಖ್ತ್ ವಸತಿ ಖಾತೆ ಸಚಿವರಾದರು. ತಮಗೆ ಕಾನೂನು ಮತ್ತು ಕಂಪನಿ ವ್ಯವಹಾರ ಖಾತೆ ನೀಡಬೇಕೆಂದು ಶಾಂತಿ ಭೂಷಣ್ ಮನವಿ ಮಾಡಿಕೊಂಡಿದ್ದರು. ಅದನ್ನು ಮೊರಾರ್ಜಿ ನೆರವೇರಿಸಿದರು. ಪ್ರತಾಪ ಚಂದ್ರ ಚುಂದರ್ ಶಿಕ್ಷಣ ಸಚಿವರಾದರು. ಪ್ರೊ.ಮಧು ದಂಡವತೆ ಒತ್ತಾಸೆಯ ಮೇರೆಗೆ ರೈಲ್ವೆ ಖಾತೆಯನ್ನು ನೀಡಲಾಯಿತು. ಆ ಖಾತೆಯನ್ನು ಜಾರ್ಜ್ ಫರ್ನಾಂಡೀಸ್ ಅವರಿಗೆ ನೀಡಬೇಕೆಂದು ಮೊರಾರ್ಜಿ ಬಯಸಿದ್ದರು. ವಾಣಿಜ್ಯ, ನಾಗರಿಕ ಪೂರೈಕೆ ಮತ್ತು ಸಹಕಾರ ಖಾತೆಗಳನ್ನು ಮೋಹನ ಧಾರಿಯಾ ಅವರಿಗೆ ವಹಿಸಿಕೊಡಲಾಯಿತು. ಪ್ರವಾಸೋದ್ಯಮ ಮತ್ತು ನಾಗರಿಕ ವಿಮಾನಯಾನ ಖಾತೆಯನ್ನು ಪುರುಷೋತ್ತಮ ಕೌಶಿಕ್ ಅವರಿಗೆ ನೀಡಲಾಯಿತು. ಪ್ರಧಾನಿ ಇಂದಿರಾ ಗಾಂಧಿಯವರನ್ನು ಸೋಲಿಸಿದ್ದ ರಾಜ್ ನಾರಾಯಣಗೆ ಯಾವ ಖಾತೆ ನೀಡಬೇಕು ಎಂಬ ಬಗ್ಗೆ ತೀವ್ರ ಕುತೂಹಲವಿತ್ತು. ಅವರನ್ನು ಸಂಪುಟಕ್ಕೆ ತೆಗೆದುಕೊಳ್ಳಬಾರದೆಂದು ಆರಂಭದಲ್ಲಿ ಮೊರಾರ್ಜಿ ಯೋಚಿಸಿದ್ದರು. ಆದರೆ ಇಂದಿರಾ ಅವರನ್ನು ಮಣಿಸಿದ ಅವರನ್ನು ಸಚಿವರನ್ನಾಗಿ ಮಾಡಲೇಬೇಕು ಎಂಬ ಒತ್ತಡ ಹೆಚ್ಚಿದ್ದರಿಂದ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆಗಳನ್ನು ಕೊಡಲಾಯಿತು. ಎಚ್.ಎಂ.ಪಟೇಲ್ ಹಣಕಾಸು ಸಚಿವರಾದರು. ಬಿಜು ಪಾಟ್ನಾಯಕ್ ಅವರಿಗೆ ಉಕ್ಕು ಮತ್ತು ಗಣಿ ಖಾತೆ ವಹಿಸಲಾಯಿತು. ಪಿ.ರಾಮಚಂದ್ರನ್ (ಇಂಧನ), ರವೀಂದ್ರ ವರ್ಮಾ (ಸಂಸದೀಯ ಮತ್ತು ಕಾರ್ಮಿಕ) ಮತ್ತು ಬ್ರಿಜ್ ಲಾಲ್ ವರ್ಮಾ (ಸಂಪರ್ಕ) ಸೇರಿದಂತೆ ಇಪ್ಪತ್ತು ಮಂದಿ ಕ್ಯಾಬಿನೆಟ್ ದರ್ಜೆ ಸಚಿವರಾದರು. ಸತೀಶ ಅಗರವಾಲ್, ರೇಣುಕಾ ದೇವಿ ಬಾರಾಕಟಕಿ, ಆರಿಫ್ ಬೇಗ್, ಚಾಂದ್ ರಾಮ್, ಕೃಷ್ಣ ಕುಮಾರ ಗೋಯಲ್, ಧನ್ನ ಸಿಂಗ ಗುಲಶನ್, ರಾಮ್ ಕಿಂಕರ್, ಎಸ್.ಕುಂದು, ಕುಮಾರಿ ಅಭಾ ಮೈತಿ, ಧನಿಕ್ ಲಾಲ್ ಮಂಡಲ್, ಜನೇಶ್ವರ ಮಿಶ್ರಾ, ಕರಿಯ ಮುಂಡ, ಎಸ್.ಡಿ.ಪಾಟೀಲ್, ಫಜ್ಲೂರ್ ರೆಹಮಾನ್, ಲ್ಯಾರಾಂಗ್ ಸಾಯಿ, ನರಹರಿ ಪ್ರಸಾದ ಸುಖದೇವ ಸಾಯಿ, ಶೆಯೋ ನರೈನ್, ಶೇರ್ ಸಿಂಗ್, ಭಾನು ಪ್ರತಾಪ ಸಿಂಗ್, ಜಗಬೀರ್ ಸಿಂಗ್, ರಾಮ್ ಕಿರಪಾಲ್ ಸಿನ್ಹ, ನರಸಿಂಗ್ ಯಾದವ ಮತ್ತು ಝುಲ್ಫಿಕ್ವಾರುಲ್ಲಾಹ್ ರಾಜ್ಯ (ಮಿನಿಸ್ಟರ್ ಆಫ್ ಸ್ಟೇಟ್) ಖಾತೆ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು. ಮೊರಾರ್ಜಿಯವರ ಮೊದಲ ಸಂಪುಟದಲ್ಲಿ ಒಟ್ಟೂ ನಲವತ್ತೆಂಟು ಸಚಿವರಾಗಿ ಅಧಿಕಾರ ವಹಿಸಿಕೊಂಡರು.

ವಿಶ್ವವನ್ನು ಕಾಡಿದ ಕ್ಷಯಕ್ಕೆ ಮದ್ದುಕೊಟ್ಟ ಕಾಚ್

ಹಿಂದಿರುಗಿ ನೋಡಿದಾಗ

ಡಾ.ನಾ.ಸೋಮೇಶ್ವರ

vveditoped@gmail.com

ಕ್ಷಯ ಬ್ಯಾಕ್ಟೀರಿಯವು ಪೂರ್ವ ಆಫ್ರಿಕದಲ್ಲಿ ಸುಮಾರು 30,000 ವರ್ಷಗಳ ಹಿಂದೆ ಹುಟ್ಟಿರಬಹುದು. ಮನುಕುಲವನ್ನು ನವಶಿಲಾಯುಗದಿಂದ ಕಾಡುತ್ತಿದೆ ಎನ್ನುವುದಕ್ಕೆ ಪುರಾವೆಯು ಈಜಿಪ್ಟಿನ ಮಮ್ಮಿಗಳಲ್ಲಿ (ಕ್ರಿ.ಪೂ.3000) ದೊರೆತಿದೆ. ರಾಬರ್ಟ್ ಬರ್ನ್ಸ್, ಜಾನ್ ಕೀಟ್ಸ್, ಬೈರನ್, ಶೆಲ್ಲಿ, ಆಂಟನ್ ಚೆಕಾವ್, ಫ್ರಾಂಜ್ ಕಾಫ್ಕ, ಡಿ.ಎಚ್.ಲಾರೆನ್ಸ್, ಜಾರ್ಜ್ ಆರ್ವೆಲ್, ಅಲೆಕ್ಸಾಂಡರ್ ಪೋಪ್, ಅಲೆಗ್ಸಾಂಡರ್ ಗ್ರಹಾಮ್ ಬೆಲ್, ಫ್ಲಾರೆನ್ಸ್ ನೈಟಿಂಗೇಲ್, ಜಾನ್ ರಸ್ಕಿನ್, ರಾಬರ್ಟ್ ಲೂಯಿ ಸ್ಟೀವನ್ಸನ್, ಶೋಪಿನ್, ಇಮಾನ್ಯುಯಲ್ ಕಂಟ್, ಡಿಮಿಟ್ರೀ ಮೆಂಡಲೀವ್, ನಥಾನಿಯಲ್ ಹಾಥೋರ್ನ್, ಹೆನ್ರಿ ಡೇವಿಡ್ ಥೋರು, ಇಮ್ಮಡಿ ನೆಪೋಲಿಯನ್, ಮೊಹ್ಮದ್ ಅಲಿ ಜಿನ್ನ, ಪೇಶ್ವ ಮಾಧವರಾವ್-1, ನೆಲ್ಸನ್ ಮಂಡೇಲ, ಹೋ ಚಿ ಮಿನ್, ಆನಂದಿ ಗೋಪಾಲ ಜೋಷಿ (ಪ್ರಥಮ ಭಾರತೀಯ ಮಹಿಳಾ ವೈದ್ಯೆ) ಶ್ರೀನಿವಾಸ ರಾಮಾನುಜನ್, ನಂದಳಿಕೆಯ ನಾರಣಪ್ಪ (ಮುದ್ದಣ) ಮುಂತಾದವರೆಲ್ಲ ಈ ಮಾರಕ ರೋಗಕ್ಕೆ ಬಲಿಯಾದರು.

ಈ ಮಾರಕ ರೋಗವನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ನೆರವಾದ ಪ್ರಾತಃಸ್ಮರಣೀಯ ವೈದ್ಯರು ಹಾಗೂ ಸಂಶೋಧಕರು ಹಾಗೂ ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆ. ಅಂತಹವರಲ್ಲಿ ಬಹಳ ಮುಖ್ಯವಾಗಿರುವವರ ಕಾಣಿಕೆಯಲ್ಲಿ ಸಂಕ್ಷಿಪ್ತವಾಗಿ ಗಮನಿಸೋಣ.

ಡಾ.ರೆನೆ ಥಿಯೋಫೈಲ್ ಹಯಾಸಿಂಥ್ ಲೆನೆಕ್ (1781–1826) ಓರ್ವ ಫ್ರೆಂಚ್ ವೈದ್ಯ ಹಾಗೂ ಸಂಗೀತ ಕೋವಿದ. ಇವನು ತನಗೆ ಅಗತ್ಯವಾಗಿದ್ದ ಕೊಳಲನ್ನು ತಾನೇ ಸಿದ್ಧಪಡಿಸಿಕೊಳ್ಳುತ್ತಿದ್ದ. ಒಮ್ಮೆ ಓರ್ವ ದಢೂತಿ ಹೆಂಗಸಿನ ಸ್ತನದ ಮೇಲೆ ಕಿವಿಯನ್ನಿಟ್ಟು ಆಕೆಯ ಎದೆ ಬಡಿತವನ್ನು ಆಲಿಸುವುದು ಮುಜುಗರವೆನಿಸಿತು. ಹಾಗಾಗಿ ಅವನು ಕಾಗದವನ್ನು ಸುರುಳಿ ಸುತ್ತಿ ಒಂದು ತುದಿಯನ್ನು ಆಕೆಯ ಎದೆಯ ಮೇಲಿಟ್ಟು ಮತ್ತೊಂದು ತುದಿಯನ್ನು ತನ್ನ ಕಿವಿಗೆ ಹೊಂದಿಸಿ, ಆಕೆಯ ಹೃದಯ ಮಿಡಿತವನ್ನು ಸ್ಪಷ್ಟವಾಗಿ ಆಲಿಸಿದ. ಬಿದಿರಿನಿಂದ ಕೊಳಲನ್ನು ರೂಪಿಸಬಲ್ಲವನಾಗಿದ್ದ ಲೆನೆಕ್, ಸ್ಟೆಥೋಸ್ಕೋಪನ್ನು ರೂಪಿಸಿದ. ಆಧುನಿಕ ವೈದ್ಯಕೀಯ ಕ್ಷೇತ್ರದ ಅತ್ಯಂತ ಸರಳ ಆದರೆ ಅತ್ಯುಪಯುಕ್ತ ಸಾಧನವನ್ನು ನೀಡಿದ. ಆಧುನಿಕ ವೈದ್ಯಕೀಯದಲ್ಲಿ ಆಲಿಸುವಿಕೆ (ಆಸ್ಕಲ್ಟೇಶನ್) ಎಂಬ ಪರೀಕ್ಷಾ ಪದ್ಧತಿಯು ಜಾರಿಗೆ ಬಂದಿತು. ಸ್ಟೆಥೋಸ್ಕೋಪಿನ ಮೂಲಕ ಹೃದಯ ಮತ್ತು ಶ್ವಾಸಕೋಶಗಳ ಕಾರ್ಯಸ್ವರೂಪವನ್ನು ಅಧ್ಯಯನ ಮಾಡಿದ. ಅವುಗಳಲ್ಲಿ ಮುಖ್ಯವಾದದ್ದು ಪಲ್ಮನರಿ ಥೈಸಿಸ್ ಎಂದು ಹೆಸರಾಗಿದ್ದ ಕ್ಷಯವು ಮುಖ್ಯವಾಗಿತ್ತು. ವೈದ್ಯಕೀಯದಲ್ಲಿ ಬಳಸುವ ರೇಲ್ಸ್, ರಾಂಕೈ, ಕ್ರೆಪಿಟನ್ಸ್, ಇಗೋಫೋನಿ ಮುಂತಾದ ಶ್ವಾಸಕೋಶಗಳ ಭಿನ್ನ ಸ್ಥಿತಿ-ಗತಿಗಳನ್ನು ವಿವರಿಸುವ ತಾಂತ್ರಿಕ ಪದಗಳ ಜನನಕ್ಕೆ ಕಾರಣನಾದ. ಮಾನವನ ಇತಿಹಾಸದಲ್ಲಿ ವೈದ್ಯರು ಮೊದಲ ಬಾರಿಗೆ ಶ್ವಾಸಕೋಶ ಕ್ಷಯವನ್ನು ಪತ್ತೆಹಚ್ಚಲು ಸಾಧ್ಯವಾಯಿತು.

ಡಾ.ರಾಬರ್ಟ್ ಕಾಚ್ (1843–1910) ಜರ್ಮನಿಯ ಹ್ಯಾನೋವರ್‌ನಲ್ಲಿ ಜನಿಸಿದ. ಈತ ಶಾಲೆಗೆ ಹೋಗದೆ, ಕೇವಲ ಪತ್ರಿಕೆಗಳಲ್ಲಿರುವ ಅಕ್ಷರಗಳನ್ನು ಗುರುತಿಸಿ ಓದಲು ಕಲಿತನಂತೆ. ಆಗ ಆತನಿಗೆ ಐದು ವರ್ಷ. ಗಾಂಟಿಂಜನ್ ವಿಶ್ವವಿದ್ಯಾನಿಲಯದಿಂದ ವೈದ್ಯಕೀಯ ಪದವಿಯನ್ನು ಪಡೆದ (1866). ಫ್ರಾಂಕೋ- ಪರ್ಷಿಯಾ ಯುದ್ಧದಲ್ಲಿ ಸೇವೆಯನ್ನು ಸಲ್ಲಿಸಿ, ಪೋಲಂಡಿನ ವೂಲ್‌ಸ್ಟೈನ್‌ನಲ್ಲಿ ಜಿಲ್ಲಾ ವೈದ್ಯಾಧಿಕಾರಿಯಾಗಿ ನೇಮಕಗೊಂಡ. ಅಲ್ಲಿಯೇ ನಮ್ಮ ಕಣ್ಣಿಗೆ ಕಾಣದ ಸೂಕ್ಷ್ಮ ಜೀವಿಗಳು, ವಾಸ್ತವದಲ್ಲಿ ರೋಗಜನಕಗಳು ಎಂದು ತರ್ಕಿಸಿ ಸಂಶೋಧನೆಯನ್ನು ಆರಂಭಿಸಿದ. ನೆರಡಿ ರೋಗಕ್ಕೆ (ಆಂಥ್ರಾಕ್ಸ್) ಕಾರಣವಾದ ಬ್ಯಾಕ್ಟೀರಿಯವನ್ನು ಹಾಗೂ ಅವುಗಳ ಬೀಜಕಗಳನ್ನು (ಸ್ಪೋರ್ಸ್) ಗಾಜಿನ ತುಂಡಿನ ಮೇಲೆ ಸ್ಥಿರೀಕರಿಸಿ, ಬಣ್ಣ ಕಟ್ಟಿ, ಅವುಗಳ ಛಾಯಾ ಚಿತ್ರವನ್ನು ತೆಗೆದ. ಆಂಥ್ರಾಕ್ಸ್ ಬ್ಯಾಕ್ಟೀರಿಯವು, ಒಂದು ಪ್ರಾಣಿಯಿಂದ ಮತ್ತೊಂದು ಪ್ರಾಣಿಗೆ ನೆರಡಿ ರೋಗವನ್ನು ಹರಡುವುದನ್ನು ಪ್ರಾಯೋಗಿಕವಾಗಿ ನಿರೂಪಿಸಿದ. ಆ ಬಗ್ಗೆ ಸಂಶೋಧನಾ ಬರಹವನ್ನು ಪ್ರಕಟಿಸಿದ (1876). ಈ ಪ್ರಬಂಧವನ್ನು ಅವನಿಗೆ ಕೀರ್ತಿಯನ್ನು ತಂದುಕೊಟ್ಟಿತು. ಬರ್ಲಿನ್‌ನ ಇಂಪೀರಿಯಲ್ ಹೆಲ್ತ್ ಬ್ಯೂರೋದಲ್ಲಿ ಉದ್ಯೋಗವನ್ನು ದೊರಕಿಸಿತು. ಹೊಸ ಸ್ಥಳದಲ್ಲಿ ದೊರೆತ ಸಂಶೋಧನಾವಕಾಶಗಳನ್ನು ಬಳಸಿಕೊಂಡ. ಪಾಲ್ ಎರ್ಲಿಕ್ (1854–1915) ನೆರವಿನಿಂದ ಬ್ಯಾಕ್ಟೀರಿಯಗಳ ಬಣ್ಣಗಟ್ಟುವಿಕೆಯ ತಂತ್ರಜ್ಞಾನವನ್ನು ಕಲಿತುಕೊಂಡ. ಹಾಗೆಯೇ ಜೂಲಿಯ ರಿಚರ್ಡ್ ಪೆಟ್ರಿ (1852–1921: ಗೌರವ ನಾಮ ಪೆಟ್ರಿಡಿಶ್) ನೆರವಿನಿಂದ ಬ್ಯಾಕ್ಟೀರಿಯಗಳ ಕೃಷಿಕೆಯ (ಕಲ್ಚರ್) ಬಗ್ಗೆ ಪರಿಣತಿಯನ್ನು ಗಳಿಸಿದ. ಇವರಿಬ್ಬರ ನೆರವಿನಿಂದ ಕಾಚ್, ಕ್ಷಯ ಸಂಬಂಧಿತ ಅಧ್ಯಯನಗಳನ್ನು ತ್ವರಿತಗೊಳಿಸಿದ. ಮೊದಲಿಗೆ ಕ್ಷಯವು ಆನುವಂಶಿಕ ಕಾಯಿಲೆ ಅಥವಾ ದೈವ ಪ್ರಕೋಪದ ಕಾಯಿಲೆ ಎನ್ನುವುದನ್ನು ಅಲ್ಲಗಳೆದ. ಕ್ಷಯಕ್ಕೆ ಕಾರಣವಾದ ಮೈಕೋಬ್ಯಾಕ್ಟೀರಿಯಂ ಟ್ಯುಬರ್ಕ್ಯುಲೋಸಿಸ್ ಎಂಬ ಸೂಕ್ಷ್ಮಜೀವಿಯನ್ನು ಪತ್ತೆಹಚ್ಚಿದ. ಈ ಬ್ಯಾಕ್ಟೀರಿಯವು ಒಂದು ಜೀವಿಯಿಂದ ಮತ್ತೊಂದು ಜೀವಿಗೆ ಕ್ಷಯವನ್ನು ಹರಡುತ್ತದೆ ಎನ್ನುವುದನ್ನು ಪುರಾವೆ ಸಹಿತ ನಿರೂಪಿಸಿ 1882 ಪ್ರಬಂಧವನ್ನು ಪ್ರಕಟಿಸಿದ. ಕೂಡಲೇ ಅವನಿಗೆ ಬರ್ಲಿನ್ ವಿಶ್ವವಿದ್ಯಾನಿಲಯದಿಂದ ಆಹ್ವಾನ ಬಂದಿತು. ಅಲ್ಲಿ ಆರಂಭವಾದ ಇನ್‌ಸ್ಟಿಟ್ಯೂಟ್ ಆಫ್ ಹೈಜೀನ್ ಸಂಸ್ಥೆಯ ನಿರ್ದೇಶಕನಾದ. ಕ್ಷಯ ಬ್ಯಾಕ್ಟೀರಿಯದ ಒಡಲಿನಿಂದ ಒಂದು ಔಷಧವನ್ನು ರೂಪಿಸಿ, ಕ್ಷಯವನ್ನು ಗುಣಪಡಿಸುವ ಕನಸನ್ನು ಕಂಡ. ಆದರೆ ಅವನಿಗೆ ಟ್ಯುಬರ್ಕ್ಯುಲಿನ್ ಎಂಬ ವಸ್ತುವು ದೊರೆಯಿತು. ಇದರಿಂದ ಮನುಷ್ಯರಲ್ಲಿ ಕ್ಷಯ ಸೋಂಕನ್ನು ಪತ್ತೆಹಚ್ಚುವುದು ಸುಲಭವಾಯಿತು. ಇದು ಮಾಂಟೂ ಪರೀಕ್ಷೆ ಅಥವ ಪಿಪಿಡಿ ಪರೀಕ್ಷೆ ಹೆಸರಾಯಿತು. ರಾಬರ್ಟ್ ಕಾಚ್ 1905ರಲ್ಲಿ ನೊಬೆಲ್ ಪಾರಿತೋಷಕದಿಂದ ಪುರಸ್ಕೃತನಾದ.

ಡಾ. ಪಾಲ್ ಎರ್ಲಿಕ್ ಪರ್ಷಿಯಾ ದೇಶದ ಸಿಲೇಸಿಯದಲ್ಲಿ ಹುಟ್ಟಿದ. 1878ರಲ್ಲಿ ವೈದ್ಯಕೀಯ ಪದವಿ ಗಳಿಸಿದ. ಬರ್ಲಿನ್ ಮೆಡಿಕಲ್ ಕ್ಲಿನಿಕ್‌ನಲ್ಲಿ ಸಂಶೋಧಕನಾಗಿ ಸೇರಿದ ಈತನು ಸೂಕ್ಷ್ಮಜೀವಿಗಳು ಹಾಗೂ ಊತಕಗಳಿಗೆ ಬಣ್ಣ ಕಟ್ಟುವ ತಂತ್ರಜ್ಞಾನವನ್ನು (ಸ್ಟೇಯಿನಿಂಗ್) ಕರಗತಗೊಳಿಸಿಕೊಂಡ. ಈತನ ನೆರವಿನಿಂದ ರಾಬರ್ಟ್ ಕಾಚ್, ಕ್ಷಯ ಬ್ಯಾಕ್ಟೀರಿಯವನ್ನು ಸುಲಭವಾಗಿ ಪತ್ತೆಹಚ್ಚಿದ. ಬಣ್ಣಗಳ ಜೊತೆಯಲ್ಲಿ ಕೆಲಸ ಮಾಡುತ್ತಿದ್ದ ಎರ್ಲಿಕ್, ಕೆಲವು ಬಣ್ಣಗಳು ರೋಗಜನಕಗಳನ್ನು ನಿಗ್ರಹಿಸಲು ಶಕ್ತವಾಗಿರಬಹುದು ಎಂದು ತರ್ಕಿಸಿದ. ಆತನ ತರ್ಕ ಸುಳ್ಳಾಗಲಿಲ್ಲ, ಸ್ಯಾಲ್ವರಸನ್ ಎಂಬ ಹೆಸರಿನ ಸಂಯುಕ್ತವು, ಮ್ಯಾಜಿಕ್ ಬುಲೆಟ್ ರೂಪದಲ್ಲಿ ಸಿಫಿಲಿಸ್ ಕಾಯಿಲೆಯನ್ನು ಗುಣಪಡಿಸಿತು. 1908ರಲ್ಲಿ ನೊಬೆಲ್ ಪಾರಿತೋಷಕವನ್ನು ಪಡೆದ ಎರ್ಲಿಕ್ ರಸಾಯನ ಚಿಕಿತ್ಸೆ (ಕೀಮೋಥೆರಪಿ) ಎಂಬ ಹೊಸ ಚಿಕಿತ್ಸಾ ತಂತ್ರಜ್ಞಾನವು ಹುಟ್ಟಲು ಕಾರಣನಾದ.

ಡಾ.ಸೆಲ್ಮನ್ ವಕ್ಸ್‌ಮನ್ (1888–1973) ರಷ್ಯಾ ಮೂಲದವನಾದರೂ 1910ರಲ್ಲಿ ಅಮೆರಿಕದಲ್ಲಿ ನೆಲೆಸಿದ. ಜೀವ ಶಾಸ್ತ್ರದಲ್ಲಿ ಪಿ.ಎಚ್‌ಡಿ ಪಡೆದ ಮೇಲೆ ರುಟ್ಗರ್ ವಿದ್ಯಾಲಯದಲ್ಲಿ ಮಣ್ಣಿನ ಸೂಕ್ಷ್ಮಜೀವಿಗಳ ತಜ್ಞನಾಗಿ ಕೆಲಸವನ್ನು ಮಾಡಲಾರಂಭಿಸಿದ. ತನ್ನ ವಿದ್ಯಾರ್ಥಿಗಳೊಂದಿಗೆ ಸೇರಿ ಮಣ್ಣಿನಲ್ಲಿರುವ ಸೂಕ್ಷ್ಮಜೀವಿಗಳನ್ನು ಬಳಸಿಕೊಂಡು ಹೊಸ ಪ್ರತಿಜೈವಿಕಗಳನ್ನು ರೂಪಿಸುವ ಯೋಜನೆಯನ್ನು ಹಾಕಿಕೊಂಡ. ಆತನು ರೂಪಿಸಿದ ನಿಯೋಮೈಸಿನ್ ಪ್ರತಿಜೈವಿಕವು ಇಂದಿಗೂ ಸಹ ಬಳಕೆಯಲ್ಲಿದೆ. ವಕ್ಸ್‌ಮನ್ ಬಳಿ ಆಲ್ಬರ್ಟ್ ಶಾಟ್ಜ್ (1920–2005) ಎಂಬ ಸ್ನಾತಕ ವಿದ್ಯಾರ್ಥಿಯಿದ್ದ. 1943ರಲ್ಲಿ ಈತನು ಮಣ್ಣಿನಲ್ಲಿದ್ದ ಸ್ಟ್ರೆಪ್ಟೋಮೈಸೀಸ್ ಗ್ರೈಸಿಯನ್ಸ್ ಎಂಬ ಬ್ಯಾಕ್ಟೀರಿಯವನ್ನು ಗುರುತಿಸಿ, ಪ್ರತ್ಯೇಕಿಸಿ, ಶುದ್ಧರೂಪದಲ್ಲಿ ಸಂಗ್ರಹಿಸಿದ. ವಕ್ಸ್‌ಮನ್ ಕೂಡಲೇ ಮರ್ಕ್ ಔಷಧ ತಯಾರಿಕಾ ಸಂಸ್ಥೆಯೊಂದಿಗೆ ಒಪ್ಪಂದವನ್ನು ಮಾಡಿಕೊಂಡ. ಶಿಷ್ಯನು ಕಂಡುಹಿಡಿದ ಬ್ಯಾಕ್ಟೀರಿಯ ಉತ್ಪಾದಿಸುವ ಸ್ಟ್ರೆಪ್ಟೋಮೈಸಿನ್ ಪ್ರತಿಜೈವಿಕವು ಕ್ಷಯವನ್ನು ಗುಣಪಡಿಸಬಲ್ಲದೇ ಎಂಬುದರ ಬಗ್ಗೆ ಕ್ರಮಬದ್ಧ ಸಂಶೋಧನೆಯನ್ನು ನಡೆಸಿದ. 1947ರಲ್ಲಿ ಕ್ಷಯವನ್ನು ಗುಣಪಡಿಸಬಲ್ಲ ಮೊದಲ ಔಷಧವನ್ನು ಜಗತ್ತಿಗೆ ನೀಡಿದ. ಒಂದು ವರ್ಷದ ಒಳಗೆ ಸ್ವೀಡಿಶ್ ವಿಜ್ಞಾನಿ ಜೋರ್ಗನ್ ಲೆಹ್ಮನ್ (1898–1989) ಪ್ಯಾರಾ ಅಮೈನೋ ಸ್ಯಾಲಿಸಿಲಿಕ್ ಆಸಿಡ್ (ಪ್ಯಾಸ್) ಎಂಬ ಔಷಧವನ್ನು ರೂಪಿಸಿದ. ಸ್ಟ್ರೆಪ್ಟೋಮೈಸಿನ್ ಮತ್ತು ಪ್ಯಾಸ್ ಎರಡೂ ಔಷಧಗಳನ್ನು ಒಟ್ಟಿಗೆ ನೀಡಿದಾಗ ಅವು ಕ್ಷಯವನ್ನು ಪರಿಣಾಮಕಾರಿಯಾಗಿ ನಿಗ್ರಹಿಸಿದವು. 1952ರಲ್ಲಿ ವಕ್ಸ್‌ಮನ್‌ನಿಗೆ ಸ್ಟ್ರೆಪ್ಟೋಮೈಸಿನ್ ಕಂಡು ಹಿಡಿದುದಕ್ಕಾಗಿ ನೊಬೆಲ್ ಪಾರಿತೋಷಕವು ದೊರೆಯಿತು. ಆದರೆ ನೊಬೆಲ್ ಸಮಿತಿಯು ಶಾಟ್ಜ್ ಮತ್ತು ಲೆಹ್ಮನ್‌ರನ್ನು ಪ್ರಜ್ಞಾಪೂರ್ವಕವಾಗಿ ಮರೆಯಿತು.

ಡಾ.ಆಲ್ಬರ್ಟ್ ಶಾಟ್ಜ್, ಅಮೆರಿಕದ ಕನೆಕ್ಟಿಕಟ್ ಪ್ರದೇಶದಲ್ಲಿ ಜನಿಸಿದ. ಕೃಷಿ ಪದವಿಯನ್ನು ಪಡೆಯಲು ರಟ್ಗರ್ ವಿಶ್ವವಿದ್ಯಾಲಯವನ್ನು ಸೇರಿಕೊಂಡ. ಆದರೆ ವಕ್ಸ್‌ಮನ್ ಸಂಸರ್ಗದಿಂದ ಸೂಕ್ಷ್ಮಜೀವಿಶಾಸ್ತ್ರದಲ್ಲಿ ಆಸಕ್ತಿಯನ್ನು ತಳೆದು ಸಂಶೋಧನೆಗೆ ಇಳಿದ. ವಿಶ್ವದ ಎರಡನೆಯ ಮಹಾಯುದ್ಧದಲ್ಲಿ ಅಲೆಗ್ಸಾಂಡರ್ ಫ್ಲೆಮಿಂಗ್ ಕಂಡು ಹಿಡಿದ ಪೆನಿಸಿಲಿನ್, ರೋಧಕತೆಯ (ರೆಸಿಸ್ಟನ್ಸ್) ಕಾರಣ ಕೆಲವರಲ್ಲಿ ವಿಫಲವಾಗಿ, ಸೈನಿಕರು ಸಾಯುವುದನ್ನು ಕಣ್ಣಾರೆ ಕಂಡ. ಹೊಸ ಪ್ರತಿಜೈವಿಕವನ್ನು ಜಗತ್ತಿಗೆ ನೀಡಲು ನಿರ್ಧರಿಸಿದ. ಅದರಂತೆಯೇ ಸ್ಟ್ರೆಪ್ಟೋಮೈಸಿನ್ ರೂಪಿಸಿದ. ಈ ಸಂಶೋಧನೆಯಿಂದ ಅವನಿಗೆ ಸುಲಭವಾಗಿ ಪಿ.ಎಚ್‌ಡಿ ದೊರೆಯಿತು. ಆದರೆ ಮರ್ಕ್ ಜತೆಯಲ್ಲಿ ವಕ್ಸ್‌ಮನ್ ಮಾಡಿಕೊಂಡಿದ್ದ ಅಪಾರ ಮೊತ್ತದ ಒಪ್ಪಂದದಲ್ಲಿ ಶಾಟ್ಜ್ ಹೊರಗುಳಿದಿದ್ದ. ಹಾಗಾಗಿ ಅವನಿಗೆ ನ್ಯಾಯಬದ್ಧವಾಗಿ ದೊರೆಯಬೇಕಾಗಿದ್ದ ಹಣ, ಆತನಿಗೆ ದೊರೆಯಲಿಲ್ಲ, ಶಾಟ್ಜ್‌ನಿಗೆ ಅಪಾರ ಖೇದವಾಗಿ ಅಮೆರಿಕವನ್ನೇ ಬಿಟ್ಟು ಚಿಲಿ ದೇಶಕ್ಕೆ ಹೋದ. ಆದರೆ ವಕ್ಸ್‌ಮನ್ ಜೊತೆಯಲ್ಲಿ ವೈಯುಕ್ತಿಕವಾಗಿ ಹಾಗೂ ಸಾರ್ವಜನಿಕವಾಗಿ ಸಂಘರ್ಷಕ್ಕಿಳಿದ. ನೊಬೆಲ್ ಸಮಿತಿಯೂ ಸಹ ಶಾಟ್ಜ್‌ನನ್ನು ಸಂಪೂರ್ಣವಾಗಿ ಕಡೆಗಣಿಸಿದಾಗ ಹತಾಶನಾದ. ಅಲ್ಲಿಯೂ ಅವನು ಆರ್ಥಿಕವಾಗಿ ನಷ್ಟವನ್ನು ಅನುಭವಿಸಿದ. 1990ರಲ್ಲಿ ಅಮೆರಿಕದ ಔದ್ಯೋಗಿಕ ಸೂಕ್ಷ್ಮಜೀವಿ ವಿಜ್ಞಾನದ ಸಂಸ್ಥೆ ಹಾಗೂ ಅಮೆರಿಕದ ಎದೆಗೂಡಿನ ತಜ್ಞರ ಸಂಸ್ಥೆಗಳು ಕ್ಷಯ ಚಿಕಿತ್ಸೆಯ ಯಶಸ್ಸು ಶಾಟ್ಜ್‌ಗೆ ಸಹ ಸಲ್ಲಬೇಕು ಎಂದು ಅಧಿಕೃತವಾಗಿ ಸಾರಿದರು.

ಡಾ.ಜಾರ್ಗನ್ ಲೆಹ್ಮನ್, ಡೆನ್ಮಾರ್ಕಿನ ಕೋಪನ್‌ಹೇಗನ್‌ನಲ್ಲಿ ಹುಟ್ಟಿದ. ಲಂಡ್ ವಿಶ್ವವಿದ್ಯಾನಿಲಯದಿಂದ ಅಂಗ ಕ್ರಿಯಾ ವಿಜ್ಞಾನದಲ್ಲಿ ಪದವಿಯನ್ನು ಪಡೆದ. ಸ್ವೀಡನ್ನಿಗೆ ಬಂದ. ಸಂಶೋಧನೆಯಲ್ಲಿ ತೊಡಗಿಕೊಂಡ. 1941ರಲ್ಲಿ ರಕ್ತಗರಣೆಯನ್ನು ಕರಗಿಸಬಲ್ಲ ಡೈಕ್ಯುಮರಾಲ್ ಔಷಧವನ್ನು ರೂಪಿಸಿದ. ಎರಡು ವರ್ಷಗಳ ನಂತರ ಪ್ಯಾಸ್ ರೂಪಿಸಿ, ಕ್ಷಯ ರೋಗಿಗಳ ಮೇಲೆ ಪ್ರಯೋಗಿಸಿದ. ಲೆಹ್ಮನ್ ತನ್ನ ಅಷ್ಟೂ ಅಧ್ಯಯನವನ್ನು ವಿಶ್ವದ ಎರಡನೆಯ ಮಹಾಯುದ್ಧದವಧಿಯಲ್ಲಿ ನಡೆಸಿದ ಕಾರಣ, ಅವನ ಸಂಶೋಧನೆಯು ಹೊರಜಗತ್ತಿಗೆ ತಿಳಿಯಲಿಲ್ಲ, ವಕ್ಸ್‌ಮನ್‌ನಿಗೂ ಸಹ ಈ ಬಗ್ಗೆ ಮಾಹಿತಿಯಿರಲಿಲ್ಲ. 1948ರ ವೇಳೆಗೆ ಕ್ಷಯ ಬ್ಯಾಕ್ಟೀರಿಯವು ಸ್ಟ್ರೆಪ್ಟೋಮೈಸಿನ್ ಪ್ರತಿಜೈವಿಕಕ್ಕೆ ರೋಧಕತೆಯನ್ನು ಬೆಳೆಸಿಕೊಂಡ ಕಾರಣ, ಎರಡೂ ಔಷಧಗಳನ್ನು ಒಟ್ಟಿಗೆ ಪ್ರಯೋಗಿಸುವ ಅಧ್ಯಯನಗಳು ನಡೆದವು. ಜೋಡಿ ಔಷಧಗಳು ಹೆಚ್ಚು ಪರಿಣಾಮಕಾರಿಯಾದವು. ಪ್ಯಾಸ್‌ನನ್ನು ಇಂದಿಗೂ ಬಳಸುತ್ತಿದ್ದೇವಾದರೂ, ಆತ ಸದಾ ಕಾಲಕ್ಕೂ ನೊಬೆಲ್ ವಂಚಿತನಾಗಿ ಉಳಿಯುತ್ತಾನೆ ಎನ್ನುವುದು ಒಂದು ವಿಪರ್ಯಾಸವಾಗಿದೆ.

ರೈತರ ಅಭಿವೃದ್ಧಿ; ಮತ್ತದರ ಪಾತ್ರಧಾರಿಗಳು



ನವ ವಿಚಾರ

ತೇಜಸ್ ಎಚ್.ಎನ್

vveditoped@gmail.com

ಭಾರತ ಒಂದು ಕೃಷಿ ಪ್ರಧಾನ ರಾಷ್ಟ್ರ ಸುಮಾರು 60 ಪ್ರತಿಶತ ಜನಸಂಖ್ಯೆ, ಕೃಷಿ ಮತ್ತು ಕೃಷಿ ಸಂಬಂಧಿತ ವಲಯದ ಮೇಲೆ ಅವಲಂಬಿತವಾಗಿದೆ ಇಡೀ ಇಂಡಿಯಾದ ಜಿಡಿಪಿಗೆ 18 ರಿಂದ 19% ಕೊಡುಗೆಯನ್ನು ಕೃಷಿ ಕ್ಷೇತ್ರ ನೀಡುತ್ತಿದೆ. ಇಂದಿಗೂ ಸಹ ಭಾರತದಂತ ಪ್ರಜಾಪ್ರಭುತ್ವದ ರಾಷ್ಟ್ರದಲ್ಲಿ ರಾಜಕೀಯ ಧುರೀಣರು ರೈತರ ಮೇಲೆ ಕರುಣೆ ತೋರಿಸುತ್ತಾರೆ ಹೊರತು ರೈತರ ಅಭಿವೃದ್ಧಿಗೆ ಶಿಸ್ತುಬದ್ಧ ಕ್ರಮ ಕೈಗೊಳ್ಳುವಲ್ಲಿ ವಿಫಲರಾಗುತ್ತಿದ್ದಾರೆ. ರೈತರಿಗೆ ಬೇಕಾಗಿರುವುದು ರಾಜಕಾರಣಿಗಳು ಅಧಿಕಾರ ಶಾಹಿಗಳು ತೋರಿಸುವಂತಹ ಅನುಕಂಪ ಮತ್ತು ಕರುಣೆಯಲ್ಲ, ರೈತರಿಗೆ ಅವಶ್ಯಕತೆ ಇರುವುದು ರೈತಪರ ಕಾನೂನುಗಳು ಕೃಷಿ ಮತ್ತು ಇತರ ಚಟುವಟಿಕೆಗಳನ್ನು ಉತ್ತೇಜಿಸುವಂತಹ ಕಾರ್ಯಕ್ರಮಗಳು ರೈತರಿಗೆ ಅತ್ಯವಶ್ಯಕ.

ಸಮಾಜದ ಒಂದು ವರ್ಗ ಇಂದಿಗೂ ಸಹ ರೈತ ಎಂದರೆ ಹಳೆ ಪಂಚೆ ಹರಿದು ಹೋದ ಅಂಗಿ, ಕುರುಚಲು ಗಡ್ಡದಿಂದ ಕೂಡಿದ ವ್ಯಕ್ತಿ ಒಬ್ಬ ಬಿರುಕು ಬಿಟ್ಟ ಭೂಮಿಯಲ್ಲಿ ಮಳೆಯನ್ನು ಕಾಯುತ್ತಾ ಆಕಾಶದತ್ತ ನೋಡುವ ಚಿತ್ರದಿಂದ ಬಿಂಬಿಸುತ್ತಾರೆ ಮತ್ತು ರೈತನನ್ನು ಈ ರೀತಿಯಾಗಿ ಬಿಂಬಿಸುವುದಕ್ಕೆ ವ್ಯವಸ್ಥಿತ ರೂಪದಲ್ಲಿ ಸಂಚು ನಡೆಯುತ್ತಾ ಬಂದಿದೆ ಆದರೆ ಜನಪ್ರತಿನಿಧಿಗಳ ಐಷಾರಾಮಿ ಜೀವನಶೈಲಿಗೆ ಒಂದು ಚೂರು ತೊಂದರೆಯಾಗಿಲ್ಲ.

Indian Agriculture is gambling with the south west monsoon- ಭಾರತದ ಕೃಷಿ ಎಂದರೆ ಮುಂಗಾರು ಮಳೆಯ ಜೊತೆಗಿನ ಜೂಜಾಟ ಎಂಬ ಮಾತು ಪ್ರಸಿದ್ಧವಾಗಿದೆ ಇದರ ಜೊತೆಗೆ ಭಾರತದ ಕೃಷಿ ಚಟುವಟಿಕೆಗಳು ಸರಕಾರದ ಪ್ರೈಸ್ ಪಾಲಿಸಿಯ ಮೇಲೆಯೂ ಕೂಡ ಅವಲಂಬಿತವಾಗಿದೆ ಎಂದರೆ ತಪ್ಪಾಗಲಾರದು. ಸೆಕೆಂಡರಿ ಸೆಕ್ಟರ್ ನಲ್ಲಿ ಬರುವಂತಹ ಕೈಗಾರಿಕೋದ್ಯಮದಲ್ಲಿ ಉತ್ಪಾದನೆಯಾಗುವ ಸರಕುಗಳಿಗೆ ಒಂದು ನಿರ್ದಿಷ್ಟವಾದಂತಹ ಬೆಲೆಯನ್ನು ನಿಗದಿ ಮಾಡಲಾಗಿದೆ ಆದರೆ ಕೈಗಾರಿಕೋದ್ಯಮಕ್ಕೆ ಕಚ್ಚಾ ವಸ್ತುಗಳನ್ನು ನೀಡುವಂತಹ ಪ್ರೈಮರಿ ಸೆಕ್ಟರ್‌ಎಂದರೆ ಕೃಷಿ ಕ್ಷೇತ್ರದಲ್ಲಿ ಉತ್ಪತ್ತಿಯಾಗುವ ಬೆಳೆಗಳಿಗೆ ಮತ್ತು ಕಚ್ಚಾ ವಸ್ತುಗಳಿಗೆ ನಿಗದಿತವಾದಂತಹ ಬೆಲೆ ಇರದಿರುವುದು ವಿಪರ್ಯಾಸ. ಕೇಂದ್ರ ಸರ್ಕಾರ ಸುಮಾರು 22 ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ(Minimum support price) MSP ಯೋಜನೆ ಅಡಿಯಲ್ಲಿ ಒಂದು ನಿರ್ದಿಷ್ಟವಾದಂತ ಬೆಲೆ ನಿಗದಿ ಮಾಡಿದೆ ಅದರಲ್ಲಿ 14 ಮುಂಗಾರು ಬೆಳೆಗಳು ಆರು ಹಿಂಗಾರು ಮತ್ತು ಎರಡು ವಾಣಿಜ್ಯ ಬೆಳೆಗಳು ಈ ಬೆಳೆಗಳ ಪಟ್ಟಿಯನ್ನು ನೋಡಿದರೆ ಮುಂಗಾರು ಬೆಳೆಗಳಾದ ಭತ್ತ, ಭಾಜ್ರ ,ಜೋಳ ,ರಾಗಿ ,ತುರ್ ಅಥವಾ ಅಹರ್ರ್, ಉರಾದ್, ಶೇಂಗಾ, ಸೋಯಾಬೀನ್ ,ಸೂರ್ಯಕಾಂತಿ ಬೀಜ, ಎಳ್ಳು, ನೈಜರ್ ಸೀಡ್, ಹತ್ತಿ.ಹಿಂಗಾರು ಬೆಳೆಗಳಾದ ಗೋಧಿ ಬಾರ್ಲಿ, ಬೇಳೆ, ಮಸೂರ್, ರೇಪ್ ಸೀಡ್, ಸಾಸಿವೆ, ಕುಸುಬೆ ಮತ್ತು ವಾಣಿಜ್ಯ ಬೆಳೆಗಳಾದ ಸೆಣಬು ಮತ್ತು ಕೊಪ್ರ.

ಭಾರತದಲ್ಲಿ ಕೇವಲ ಈ 22 ಬೆಳೆಗಳನ್ನು ಮಾತ್ರ ಬೆಳೆಯುತ್ತಿಲ್ಲ ಭಾರತದಲ್ಲಿ 15 ಕೃಷಿ ಅವಮಾನ ವಲಯಗಳಿವೆ ಒಂದೊಂದು ವಲಯಗಳಲ್ಲಿಯೂ ಸಹ ಆಯಾ ಹವಾಗುಣಕ್ಕೆ ಸರಿಹೊಂದುವಂತೆ ಹಲವಾರು ಬೆಳೆಗಳನ್ನು ಬೆಳೆಯುತ್ತಾರೆ ಬೆಳೆದಂತಹ ಬೆಳೆಗಳಿಗೆ ಮುಕ್ತ ಮಾರುಕಟ್ಟೆಯಲ್ಲಿ ದೊರೆಯುವ ಬೆಲೆಯೂ ಕೆಲವೊಮ್ಮೆ ಕಾಸ್ಟ್ ಆಫ್ ಕಲ್ಟಿವೇಶನ್ (ಕೃಷಿ ವೆಚ್ಚ)ಬರಿಸುವುದಕ್ಕೂ ಸಹ ಸಾಲೋದಿಲ್ಲ ಇನ್ನೂ ಕೆಲವೊಮ್ಮೆ ಕಾಸ್ಟ್ ಆಫ್ ಹಾರ್ವೆಸ್ಟಿಂಗ್ (ಕೊಯ್ಲು ವೆಚ್ಚ)ವನ್ನು ಸಹ ಬರಿಸುವುದಕ್ಕೆ ಆಗದೆ ಬೆಳೆಗಳನ್ನು ಕೊಯ್ಲು ಮಾಡದೆ ಇರುವ ಹಲವಾರು ಉದಾಹರಣೆಗಳು ನಮ್ಮ ಕಣ್ಣ ಮುಂದಿವೆ.

ನಮ್ಮದೇ ಕರ್ನಾಟಕದ ಕೋಲಾರ ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಟೊಮ್ಯಾಟೋದಂತಹ ಇನ್ನೂ ಹಲವು ತರಕಾರಿ ಬೆಳೆಗಳನ್ನು ಬೆಳೆಯುತ್ತಾರೆ ಕೇವಲ ಒಂದು ರೂಪಾಯಿ ಕಿಲೋ ಗ್ರಾಂಗೆ ಮಾರಿರುವ ಮತ್ತು ರಸ್ತೆಗಳ ಮೇಲೆ ಸುರಿದ ಉದಾರಣೆಗಳಿವೆ ಈ ರೀತಿಯಾದಂತಹ ಇನ್ನೂ ಅನೇಕ ಬೆಳೆಗಳನ್ನು ಎಂ.ಎಸ್.ಪಿ ಯೋಜನೆ ಅಡಿಗೆ ತರಬೇಕು ಎಂಬುದು ಕೋಟ್ಯಾಂತರ ರೈತರ ಆಗ್ರಹ.

ಒಬ್ಬ ಕೃಷಿ ವಿದ್ಯಾರ್ಥಿಯಾಗಿ ದೇಶದ ಆರ್ಥಿಕತೆ ಯಾವ ರೀತಿಯಲ್ಲಿ ನಡೆಯುತ್ತದೆ ಮತ್ತು ಎಲ್ಲಾ ಬೆಳೆಗಳಿಗೂ ಸಹ ಕನಿಷ್ಠ ಬೆಂಬಲ ಬೆಲೆ ನೀಡುವುದಕ್ಕೆ ಎದುರಾಗುವ ಸಮಸ್ಯೆಗಳೇನು ಮತ್ತು ಸಾಧಕ ಬಾದಕಗಳ ಬಗ್ಗೆ ಅಧ್ಯಯನ ನಡೆಸಿದ ನಂತರ ನನ್ನ ಅನಿಸಿಕೆಗಳನ್ನು ವಿಸ್ತೃತವಾಗಿ ಹೇಳುವುದಾದರೆ ಕನಿಷ್ಠ ಬೆಂಬಲ ಬೆಲೆ ಯೋಜನೆಯನ್ನು ಸಾಮಾನ್ಯವಾಗಿ ಆಹಾರ ಭದ್ರತೆಗೆ ಪ್ರಮುಖವೆಂದು ಪರಿಗಣಿಸುವ ಮತ್ತು ಮಾರುಕಟ್ಟೆಯಲ್ಲಿ ಗಮನಾರ್ಹ ಬೆಲೆ ಏರಿಳಿತಗಳನ್ನು ಎದುರಿಸುವ ಬೆಳೆಗಳಿಗೆ ಹೊಂದಿಸಲಾಗಿದೆ ಹೆಚ್ಚುವರಿಯಾಗಿ ಎಲ್ಲಾ ಬೆಳೆಗಳಿಗೆ ಎಂ.ಎಸ್.ಪಿ ಅನುಷ್ಠಾನಗೊಳಿಸುವುದು ವ್ಯವಸ್ಥಾಪನಾತ್ಮಕವಾಗಿ ಸವಾಲಾಗಿದೆ ಮತ್ತು ಸರ್ಕಾರಗಳಿಗೆ ಆರ್ಥಿಕವಾಗಿ ಹೊರೆಯಾಗಬಹುದು.

ಅಂದರೆ ಆರ್ಥಿಕ ಸವಾಲು ಹೊರತುಪಡಿಸಿದರೆ ಬೇರೆ ಇನ್ಯಾವ ಅಡಚಣೆಗಳು ಎದುರಾಗುವುದಿಲ್ಲ ಆದರೆ ಸರಕಾರಗಳು ಮತ್ತು ಜನಪ್ರತಿನಿಧಿಗಳು ತಮ್ಮ ವೋಟ್ ಬ್ಯಾಂಕ್ ರಾಜಕಾರಣದ ಸಲುವಾಗಿ, ಓಲೈಕೆ ಮತ್ತು ತುಷ್ಟಿಕರಣದ ಸಲುವಾಗಿ,ತಮ್ಮ ಡೈನಾಸ್ಟಿ ಪಾಲಿಟಿಕ್ಸ್ ಸಲುವಾಗಿ ತಮ್ಮ ಮುಂದಿನ ಪೀಳಿಗೆಯನ್ನು ರಾಜಕಾರಣದಲ್ಲಿ ಭದ್ರಗೊಳಿಸುವ ಸಲುವಾಗಿ ಯೋಜನೆಗಳನ್ನು ರೂಪಿಸುತ್ತಿದ್ದಾರೆ ವರೆತು ಸರಕಾರದ ಆರ್ಥಿಕ ಬೊಕ್ಕಸವನ್ನು ಸಮರ್ಪಕ ರೀತಿಯಲ್ಲಿ ರೈತರ ಶ್ರೇಯೋಭಿವೃದ್ಧಿಗೆ ಉಪಯೋಗಿಸುತ್ತಿಲ್ಲ ಎಂಬುದು ಚಿಂತಿಸಬೇಕಾದ ವಿಚಾರ.

ಎಂ.ಎಸ್.ಪಿ.ಯ ಮತ್ತೊಂದು ಸವಾಲು ಏನೆಂದರೆ ನಾಫೆಡ್ ನ್ಯಾಷನಲ್ ಅಗ್ರಿಕಲ್ಚರಲ್ ಕೋ ಆಪರೇಟಿವ್ ಮಾರ್ಕೆಟಿಂಗ್ ಆಫ್ ಇಂಡಿಯಾ ಲಿಮಿಟೆಡ್ ಮೂಲಕ ಕೊಬ್ಬರಿ ಖರೀದಿಯು ನಿಗದಿತ ಸಮಯಕ್ಕೆ ಆಗುತ್ತಿಲ್ಲ ಇದರ ಪರಿಣಾಮವಾಗಿ ಖರೀದಿಯ ದಿನಾಂಕ ವಿಳಂಬವಾದಂತೆ ಕೊಬ್ಬರಿಯ ತೂಕ ಕಡಿಮೆಯಾಗುತ್ತಿದೆ ಮತ್ತು ಕೊಬ್ಬರಿಯ ಗುಣಮಟ್ಟ ಕಡಿಮೆಯಾಗಿದೆ ಎಂದು ಕ್ಷುಲ್ಲಕ ಕಾರಣ ನೀಡಿ ರೈತರ ಉತ್ಪನ್ನಗಳನ್ನು ತಿರಸ್ಕರಿಸುವ ನೈಜ ನಿದರ್ಶನಗಳನ್ನು ಕಾಣಬಹುದಾಗಿದೆ ಇದು ಕೊಬ್ಬರಿಯ ಸಮಸ್ಯೆ ಮಾತ್ರ ಅಲ್ಲ ಇತರೆ ಉತ್ಪನ್ನಗಳನ್ನು ಬೆಳೆಯುವ ರೈತರು ಸಹ ಇದೇ ರೀತಿ ಯಾದಂತಹ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಆದ್ದರಿಂದ ರೈತರಿಗೆ ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡುವಷ್ಟು ಸಲೀಸಾಗಿ ನಫೆಡ್ ನಲ್ಲಿಯೂ ಸಹ ಮಾರಾಟವನ್ನು ಮಾಡುವ ಅವಕಾಶವನ್ನು ಸರ್ಕಾರಗಳು ಕಲ್ಪಿಸಬೇಕು.

ರೈತರ ಆದಾಯವನ್ನು ದ್ವಿಗುಣಗೊಳಿಸುವ ಸಲುವಾಗಿ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ರೈತರ ಸ್ವದೇಶ ಬೆಳೆಗಳನ್ನು ಮಾರಾಟ ಮಾಡಲು ಸರಕಾರದ ಮಟ್ಟದಲ್ಲಿ ಒಪ್ಪಂದಗಳನ್ನು ಮಾಡಿಕೊಳ್ಳಬೇಕು. ಇದಕ್ಕೆ ಪೂರಕವಾಗಿ ಪ್ರತಿಯೊಂದು ಜಿಲ್ಲೆಯಲ್ಲಿಯೂ ಸಹ ಕೋಲ್ಡ್ ಸ್ಟೋರೇಜ್ ಸ್ಥಾಪನೆ ಆಗಬೇಕು. ಒಂದು ವರದಿಯ ಪ್ರಕಾರ ತಾಯಿಯ ಎದೆ ಹಾಲಿನ ನಂತರ ಅತಿ ಹೆಚ್ಚು ಪೌಷ್ಠಿಕವಾಗಿರುವ ಆಹಾರವೆಂದರೆ ತೆಂಗಿನ ಎಣ್ಣೆಯಿಂದ ಸಿಗುವಂತಹ ಲಾರಿಕ್ ಆಸಿಡ್ ಆ ನಿಟ್ಟಿನಲ್ಲಿ ಇಂತಹ ತೆಂಗು ಬೆಳೆಯ ಅಸ್ಮಿತೆಯನ್ನು ಉಳಿಸುವ ಸಲುವಾಗಿ ತೆಂಗು ಬೆಳೆಯುವಂತಹ ಜಿಲ್ಲೆಗಳಲ್ಲಿ ತೆಂಗು ಟೆಕ್ನಾಲಜಿ ಪಾರ್ಕ್ ಸ್ಥಾಪನೆ ಆಗಬೇಕು.

ಸಹಕಾರಿ ಕ್ಷೇತ್ರಕ್ಕೆ ಹೆಚ್ಚು ಆದ್ಯತೆಯನ್ನು ನೀಡುವ ಮೂಲಕ ಯಾವ ರೀತಿಯಲ್ಲಿ ಕರ್ನಾಟಕದಲ್ಲಿ ಕೆಎಂಎಫ್ ಕರ್ನಾಟಕ ಮಿಲ್ಕ್ ಫೆಡರೇಶನ್ ಕಾರ್ಯ ನಿರ್ವಹಿಸುತ್ತಿದೆ ಅದೇ ರೀತಿಯಲ್ಲಿ ಕೃಷಿ ಉತ್ಪನ್ನಗಳಿಗೆ ಪ್ರತ್ಯೇಕ ಫೆಡರೇಶನ್ನಗಳು ಸ್ಥಾಪನೆ ಆಗಬೇಕು ಇದರ ಸಹಾಯದಿಂದ ರೈತರು ತಾವು ಬೆಳೆದ ಬೆಳೆಗಳನ್ನು ಒಕ್ಕೂಟ ವ್ಯವಸ್ಥೆಯ ಮೂಲಕ ತಮ್ಮದೇ ಆದಂತಹ Indigenious brand ಮಾಡಬಹುದು ಮತ್ತು ತಮ್ಮ ಮೂಲಕ ಸಾವಿರಾರು ಜನಕ್ಕೆ ಉದ್ಯೋಗ ಸೃಷ್ಟಿ ಮಾಡಬಹುದು.

ಒಬ್ಬ ಮಧ್ಯಮ ವರ್ಗದ ರೈತ ಕೃಷಿ ಮಾಡುವುದಕ್ಕೆ ಅವನು ಸರಕಾರದ ವತಿಯಿಂದ ಬೇರೆ ಇನ್ನೇನನ್ನು ಸಹ ನಿರೀಕ್ಷಿಸುವುದಿಲ್ಲ ಅವನು ನಿರೀಕ್ಷಿಸುವುದು ಕೇವಲ ವಿದ್ಯುತ್ ಸರಬರಾಜು ಕೆರೆಕಟ್ಟೆ ಚಾನಲ್‌ಗಳಿಗೆ ನೀರು ಮತ್ತು ಉತ್ತಮವಾದ ಬೆಲೆ ಮಾತ್ರ ಆದರೆ ಸರಕಾರಗಳು ಕೆರೆಕಟ್ಟೆ ಚಾನಲ್ಲಗಳಿಗೆ ಸಮರ್ಪಕವಾಗಿ ನೀರು ಹರಿಸುವುದರಲ್ಲಿ ವಿಫಲವಾಗಿವೆ. ಭಾರತದ ವಾಟರ್ ಬಜೆಟ್‌ಅನ್ನು ಒಮ್ಮೆ ವೀಕ್ಷಿಸಿದರೆ ಸರಿಸುಮಾರು ಪ್ರತಿ ವರ್ಷ 400 ಮಿಲಿಯನ್ ಹೆಕ್ಟೆ ಮೀಟರ್ ನಷ್ಟು ಮಳೆ ಆಗುತ್ತದೆ.

ಅಂದರೆ ಪ್ರತಿ ವರ್ಷ 115 ಮಿಲಿಯನ್ ಹೆಕ್ಟರ್ ಮೀಟರ್ ನಷ್ಟು ನೀರು ಉಪಯೋಗವಾಗದೆ ಸಮುದ್ರವನ್ನು ಸೇರುತ್ತಿದೆ. ಆದ್ದರಿಂದ ಈ ನೀರನ್ನು ನದಿ ಜೋಡಣೆಯ ಮೂಲಕ ಅಣೆಕಟ್ಟುಗಳ ನಿರ್ಮಾಣದ ಮೂಲಕ ಸಮರ್ಪಕವಾಗಿ ಕೃಷಿ ಚಟುವಟಿಕೆಗಳಿಗೆ ಉಪಯೋಗಿಸುವಂತಹ ಯೋಜನೆಗಳನ್ನು ರೂಪಿಸಬೇಕು ಆದರೆ ಇವತ್ತಿನ ಜನಪ್ರತಿನಿಧಿಗಳು ವಿರೋಧ ಪಕ್ಷದಲ್ಲಿದ್ದಾಗ ನೀರಾವರಿ ಯೋಜನೆಗಾಗಿ ಹೋರಾಟ ಮಾಡುತ್ತಾರೆ ಆದರೆ ಅಧಿಕಾರಕ್ಕೆ ಬಂದಾಗ ಅದರ ಚಕಾರವನ್ನು ಸಹ ಎತ್ತುವುದಿಲ್ಲ ಏಕೆಂದರೆ ಅಧಿಕಾರದ ಚುಕ್ಕಾಣಿಯನ್ನು ಹಿಡಿಯುವ ಸಲುವಾಗಿ ನದಿ ವಿವಾದವಿರುವ ರಾಜ್ಯದಲ್ಲಿರುವ ಆಡಳಿತ ಪಕ್ಷಗಳು ರಾಷ್ಟ್ರಮಟ್ಟದಲ್ಲಿ ಒಂದೇ ಮೈತ್ರಿಕೂಟದಲ್ಲಿ ಇರುತ್ತಾರೆ ಆದ್ದ ಕಾರಣದಿಂದ ನಿರ್ಧಾರಗಳು ತಮ್ಮ ಮೈತ್ರಿ ಯನ್ನು ಬಿಗಿಪಡಿಸುವ ನಿಟ್ಟಿನಲ್ಲಿ ಇರುತ್ತವೆ ಹೊರತು ರೈತರಿಗೆ ನೀರು ಒದಗಿಸುವ ನಿಟ್ಟಿನಲ್ಲಿ ಇರುವುದಿಲ್ಲ ಇನ್ನೂ ಕೆಲವು ರಾಜಕಾರಣಿಗಳಿಗೆ ಇದರ ತಲೆ ಬುಡವು ಸಹ ತಿಳಿದಿರುವುದಿಲ್ಲ.

ಒಟ್ಟಾರೆಯಾಗಿ ಒಬ್ಬ ರೈತನಿಗೆ ಸಮರ್ಪಕವಾದ ವಿದ್ಯುತ್ ಸರಬರಾಜು ಕೆರೆ ಕಟ್ಟೆಗಳಿಗೆ ನೀರು ಹರಿಸುವುದು ಮತ್ತು ತಮ್ಮ ಬೆಳೆಗಳಿಗೆ ಉತ್ತಮವಾದ ಬೆಲೆಯನ್ನು ಸರ್ಕಾರಗಳು ದೊರಕಿಸಿಕೊಟ್ಟರೆ ರೈತರ ಸರ್ವತೋಮುಖ ಅಭಿವೃದ್ಧಿ ಆಗುತ್ತದೆ ಜೊತೆಗೆ ದೇಶದ ಅಭಿವೃದ್ಧಿ ಸಹ ಆಗುತ್ತದೆ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಜಾಮೀನಿಗೆ ಹೊಸ ಷರತ್ತು ಬೇಕು!

ಆರೋಪಿಗಳಿಗೆ ನ್ಯಾಯಾಲಯದಲ್ಲಿ ನೀಡುವ ಜಾಮೀನಿನ ಸಂದರ್ಭದಲ್ಲಿ ಹಲವಾರು ನಿಯಮ ತಿಳಿಸಿರುತ್ತಾರೆ. ಇದರ ಜೊತೆಗೆ ನ್ಯಾಯಾಧೀಶರು ಮತ್ತೊಂದು ಪ್ರಮುಖವಾದ ಎಚ್ಚರಿಕೆಯನ್ನು ನೀಡಬೇಕಾಗಿದೆ.

ಜಾಮೀನಿನ ಮೇಲೆ ಬಂದವರೆಲ್ಲರೂ ಹಲವಾರು ದಶಕಗಳಿಂದ ದೊಡ್ಡ ಸಾಧನೆ ಮಾಡಿದ ರೀತಿಯಲ್ಲಿ ಸೆರೆಮನೆ ವಾಸದಿಂದ ಹೊರ ಬರುತ್ತಿದ್ದಂತೆ, ಎರಡು ಕೈ ಬೆರಳುಗಳನ್ನ ಎತ್ತಿ ತೋರಿಸುತ್ತೆ. ಜಯವನ್ನು ಸಾಧಿಸಿದವರ ರೀತಿಯಲ್ಲಿ ಕ್ಯಾಮರಾಗಳಿಗೆ ಪೋಸ್ ಕೊಡುವುದು. ಜೊತೆಗೆ ಇವರ ಅಭಿಮಾನಿಗಳು ಪಟಾಕಿಸಿಡಿಸಿ ಸಂಭ್ರಮಿಸುವುದು ಹಾರ ಹಾಕಿ ಇವರನ್ನು ಅಭಿನಂದಿಸುವುದು ,ಇವುಗಳು ಸಾಮಾನ್ಯವಾಗಿದೆ. ಜೈಲಿನಿಂದ ಜಾಮೀನು ಪಡೆದು ಹೊರಬಂದ ಮಾತ್ರಕ್ಕೆ ಯಾವ ಆರೋಪಿಗಳು ನಿರಪರಾಧಿಗಳು ಎಂದು ಅಂತ್ಯವಾದ ತೀರ್ಪಾಗಿರುವುದಿಲ್ಲ. ಈ ರೀತಿಯಲ್ಲಿ ಜಾಮೀನಿಗೆ ಸಂಭ್ರಮಿಸುವುದು ಸರಿಯಾದಂತಹ ಕ್ರಮವಲ್ಲ ಇದರಿಂದ ಇವರ ವಿರುದ್ಧ ದೂರು ಕೊಟ್ಟವರು ವಿಶ್ವಾಸವನ್ನು ಕಳೆದುಕೊಳ್ಳುತ್ತಾರೆ. ಮತ್ತು ಆತಂಕಕ್ಕೆ ಒಳಗಾಗುತ್ತಾರೆ. ಈ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿ ನ್ಯಾಯಾಧೀಶರು ಜಾಮೀನು ನೀಡುವ ಸಂದರ್ಭದಲ್ಲಿಗೆ ಆರೋಪಿಗಳ ಬೆಂಬಲಿಗರು ಯಾರು ಸಹ ಸಂಭ್ರಮಿಸುವ ಹಾಗಿಲ್ಲ. ಜೊತೆಗೆ ಆರೋಪಿಯು ಸಹ ಜಾಮೀನು ಪಡೆದ ನಂತರ ಯಾವುದೇ ರೀತಿಯ ವಿಜಯೋತ್ಸವದ ರೀತಿಯಲ್ಲಿ ವರ್ತಿಸುವಂತಿಲ್ಲ ಎಂಬ ಎಚ್ಚರಿಕೆಯನ್ನು ಆದೇಶದಲ್ಲಿ ಮುಂದಿನ ದಿನಗಳಲ್ಲಿ ದಯಮಾಡಿ ನೀಡಬೇಕಾಗಿರುವುದು ಅತ್ಯಂತ ಅವಶ್ಯವಾಗಿದೆ.

ಜನಸಾಮಾನ್ಯರು ಜಾಮೀನು ಪಡೆದ ನಂತರ ದುಃಖದಿಂದ ಇಲ್ಲವೇ ಬೇಸರದಿಂದ ಮನೆಯ ಕಡೆ ಹೋಗುತ್ತಾರೆ. ಆದರೆ ಸಾರ್ವಜನಿಕ ಜೀವನದಲ್ಲಿ ಇರುವವರು ಅಥವಾ ಶ್ರೀಮಂತರು ಎನಿಸಿಕೊಂಡವರು ಜಾಮೀನು ಪಡೆದದ್ದು ಸಾಧನೆ ಎಂಬ ರೀತಿಯಲ್ಲಿ ಬಿಂಬಿಸಿಕೊಳ್ಳುವುದು ಸಾಮಾನ್ಯವಾಗಿದೆ ಈ ಹಿನ್ನೆಲೆಯಲ್ಲಿ ನ್ಯಾಯಾಧೀಶರ ಎಚ್ಚರಿಕೆಯ ಆದೇಶಗಳು ಅತ್ಯಂತ ಅವಶ್ಯಕವಾಗಿದೆ

ಜಾಮೀನಿಗಾಗಿ ಸಂಭ್ರಮಿಸುವುದ ವಿಚಾರದಲ್ಲಿ ಎಲ್ಲ ರಾಜಕೀಯ ಪಕ್ಷದವರು ಒಂದೇ ಮನಸ್ಥಿತಿಯಲ್ಲಿದ್ದಾರೆ ಇಲ್ಲಿ ಯಾರು ಹೆಚ್ಚು ಇಲ್ಲ ಯಾರು ಕಡಿಮೆಯೂ ಇಲ್ಲ ಈ ಒಂದು ಸಂಪ್ರದಾಯ ಕಳೆದ ಕೆಲವು ವರ್ಷಗಳ ಹಿಂದೆ ಆರಂಭವಾಗಿದೆ ಹಲವಾರು ದಶಕಗಳ ಹಿಂದೆ ಸಣ್ಣ ಆರೋಪಗಳು ಬಂದ ತಕ್ಷಣವೇ ತಮ್ಮ ಸ್ಥಾನಗಳಿಗೆ ರಾಜೀನಾಮೆಯನ್ನು ನೀಡಿ ತಾವು ನಿರಪರಾಧಿ ಎಂದು ಸಾಬೀತಾಗುವ ತನಕ ಸಾರ್ವಜನಿಕರಿಂದ ದೂರ ಉಳಿದು ತಮ್ಮ ನೈತಿಕತೆಯನ್ನು ಪ್ರದರ್ಶಿಸುತ್ತಿದ್ದರು ಆದರೆ ಈಗ ಕಾಲ ಬದಲಾಗಿದೆ

-ಕೆಎಸ್ ನಾಗರಾಜ್

ಮೇರುನಟಿಯರಿಗೇಕಿಲ್ಲ ಮನ್ನಣೆ

60–70ರ ದಶಕದ ಕನ್ನಡದ ಜನಪ್ರಿಯ ಸಿನಿಮಾಗಳಲ್ಲಿ ನಾಯಕಿಯಾಗಿ ನಟಿಸಿದ್ದ, ಕನ್ನಡ ಬಿಟ್ಟು ಬೇರೆ ಭಾಷೆಗಳಲ್ಲಿ ಅಭಿನಯಿಸಲಾರೆ ಎಂದಿದ್ದ ಪ್ರತಿಭಾವಂತ ಕಲಾವಿದೆ ಮಿನುಗುತಾರೆ ಕಲ್ಪನಾ ಮರಣ ತಮ್ಮ ವಿಶಿಷ್ಟ ಶೈಲಿಯ ನಗು, ಸಂಭಾಷಣೆ ಹೇಳುವ ದಾಟಿ, ಅಭಿನಯದಿಂದ ಕನ್ನಡಿಗರ, ಪ್ರೇಕ್ಷಕರ, ಮನಸೂರೆಗೊಂಡಿದ್ದ ಮಿನುಗುತಾರೆ . ಕಲ್ಪನಾ ಪ್ರಸಿದ್ಧಿ ಪಡೆದಿದ್ದು ದುರಂತ ನಾಯಕಿಯಾಗಿ ವೃತ್ತಿ ಹಾಗೂ ನಿಜ ಜೀವನದಲ್ಲೂ ದುರಂತ ನಾಯಕಿಯಾದದ್ದು ಎಂತಹ ವಿಪರ್ಯಾಸ.

ತಮ್ಮ ವೃತ್ತಿ ಜೀವನದ ಯಶಸ್ಸಿನ ದಿನಗಳಲ್ಲಿ ಕಲ್ಪನಾ ಪ್ರದರ್ಶಿಸಿ ಅಹಂ ಆಕೆಗೆ ಹಲವು ಸಿನಿಮಾಗಳ ಅವಕಾಶ ತಪ್ಪಿಸಿತು. ನಾಗರಹಾವು, ಓಬವ್ವ ಹಾಗೂ ಎಡಕಲ್ಲು ಗುಡ್ಡದ ಮೇಲೆ ಚಿತ್ರದ ಒಬ್ಬ ನಾಯಕಿ ಪಾತ್ರಕ್ಕೆ ಕಲ್ಪನಾ ಮೊದಲು ಆಯ್ಕೆ ಆದರೂ ಅಂತಹ ಪಾತ್ರ ಮಾಡಲಾರೆ ಎಂದ ಕಲ್ಪನಾ ಜಾಗಕ್ಕೆ ಜಯಂತಿ ಬಂದು ಆ ಪಾತ್ರಗಳಲ್ಲಿ ಅಭಿನಯಿಸಿ ಅಪಾರ ಜನಪ್ರಿಯತೆ, ಪ್ರಶಸ್ತಿ ಪಡೆದ ಸಂಗತಿ ಇಂದಿನ ಪ್ರೇಕ್ಷಕರಿಗೆ ತಿಳಿದಿಲ್ಲ.

ಇಂದಿಗೂ ಕನ್ನಡದ ಕಿರುತೆರೆಯ ಪ್ರಸಾರದ ಹಳೆಯ ಕನ್ನಡ ಸಿನಿಮಾಗಳಲ್ಲಿ, ಕಲ್ಪನಾರನ್ನು ಕಂಡಾಗ ಯೂಟ್ಯೂಬ್, ವಿಕಿಪೀಡಿಯಾ, ಗೂಗಲ್ ಸರ್ಚ್‌ಗಳಲ್ಲಿ ಕಲ್ಪನಾ ಪ್ರತಿಭಾ ಪರಿಚಯ, ಇಂದಿನ ಪ್ರೇಕ್ಷರಿಗೆ ಸಿಗುತ್ತದೆ. ಕನ್ನಡದ ಮಿನುಗುತಾರೆ ಕಲ್ಪನಾರವರ ಹೆಸರನ್ನು ಕರ್ನಾಟಕದಲ್ಲಿ ಒಂದು ಸಣ್ಣ ರಸ್ತೆಗೂ ನಾಮಕರಣ ಮಾಡಿಲ್ಲದಿರುವುದು ಎಂತಹ ಕಲ್ಪನಾ ವಿಪರ್ಯಾಸ.

ಸಿನಿಮಾಗಳಲ್ಲಿ ಅವಕಾಶ ಸಿಗದಿದ್ದಾಗ ಉತ್ತರ ಕರ್ನಾಟಕದ ನಾಟಕ ಕಂಪನಿಗಳ ನಾಟಕಗಳಲ್ಲಿ ಅಭಿನಯಿಸಿದ ಕಲ್ಪನಾ ಅಲ್ಲೇ ತಮ್ಮ ಕೊನೆಯುಸಿರು ಎಳೆದದ್ದು ಎಂತಹ ಮಿನುಗು ವಿಪರ್ಯಾಸ. ಕಲ್ಪನಾ ಕೊಲೆಯಾದರು ಎನ್ನುವ ವದಂತಿಗಳು ಆಗ ಹರಡಿದ್ದು ಕಲ್ಪನಾ, ಜಯಂತಿ, ಮಂಜುಳಾ, ಲೀಲಾವತಿ, ಪಂಡರೀಬಾಯಿರಂತಹ ಜನಪ್ರಿಯ ಕನ್ನಡದ ನಾಯಕಿಯರ ಹೆಸರನ್ನು ಒಂದು ರಸ್ತೆಗೆ ಉದ್ಯಾನವನಕ್ಕೆ ನಾಮಕರಣ ಮಾಡುವ ಕಲಾವಂತಿಕೆಯನ್ನು ಬಿಬಿಎಂಪಿ, ಜಿಲ್ಲಾಡಳಿತಗಳು, ಪ್ರದರ್ಶಿಸಬಾರದೆ.

– ಮಂಜುಳಾ ರಾಮಶೇಷ ಬೆಂಗಳೂರು

ಮತದಾನ ಕಡ್ಡಾಯಗೊಳಿಸಲಿ

ಸೋಮವಾರ ಮುಕ್ತಾಯಗೊಂಡ 4 ನೇ ಹಂತದ ಲೋಕಸಭಾ ಚುನಾವಣೆಯಲ್ಲಿ ಶೇ. 65.67 ರಷ್ಟು ಮತದಾನ ವಾಗಿದೆ ಎಂದು ಚುನಾವಣಾ ಆಯೋಗ ಹೇಳಿದೆ. ಕರ್ನಾಟಕದ 2 ಹಂತದಲ್ಲಿ ನಡೆದ ಚುನಾವಣೆಯಲ್ಲಿ ಶೇ. 72.65 ರಷ್ಟು ಮತದಾನ ವಾಗಿದೆ. ಇದು ಬೇರೆ ರಾಜ್ಯಗಳಿಗೆ ಹೋಲಿಸಿದರೆ, ಶೇ. 7 ರಿಂದ 8 ರಷ್ಟು ಹೆಚ್ಚು ಮತದಾನವಾಗಿದೆ. ಇದಕ್ಕಾಗಿ ನಮ್ಮ ರಾಜ್ಯದ ಮತದಾರರನ್ನು ಅಭಿನಂದಿಸಲೇಬೇಕು. ಈ ಸಲ ಚುನಾವಣಾ ಆಯೋಗದ ಸ್ವೀಪ್ ಸಮಿತಿಯು ಹಲವಾರು ಕಾರ್ಯಕ್ರಮಗಳ ಮೂಲಕ ಮತದಾರರಲ್ಲಿ ಜಾಗೃತಿ ಮೂಡಿಸಿದ್ದು ಬಹು ಮುಖ್ಯ ಕಾರಣ ಎನ್ನಲಾಗಿದೆ.

4 ಹಂತದಲ್ಲಿ ನಡೆದ ಮತದಾನದಲ್ಲಿ,ಬಿಹಾರದಲ್ಲಿ ಶೇ. 56.7 ರಷ್ಟು ಮತ್ತು ಜಮ್ಮು ಕಾಶ್ಮೀರದಲ್ಲಿ ಶೇ.37.98 ರಷ್ಟು ಮಾತ್ರ ಮತದಾನವಾಗಿದೆ. ಮತ್ತೊಂದು ಗಮನಿಸಬೇಕಾದ ಅಂಶವೆಂದರೆ, ಜಮ್ಮು ಕಾಶ್ಮೀರದಲ್ಲಿ ನಡೆದಿರುವ ಶೇ. 37.98 ರಷ್ಟು ಮತದಾನ ಕಳೆದ ದಶಕದಲ್ಲೇ ಅತಿ ಹೆಚ್ಚು ಎಂದು ಹೇಳಲಾಗುತ್ತಿದೆ. ಯಾವುದೇ ಒಂದು, ಕ್ಷೇತ್ರದ ಲೋಕಸಭಾ ಚುನಾವಣೆಯಲ್ಲಿ ಕನಿಷ್ಠ ಶೇಕಡಾ 50 ರಷ್ಟು ಆದರೂ ಮತದಾನವಾಗುವಂತೆ, ಚುನಾವಣಾ ಆಯೋಗ ಕ್ರಮ ಕೈಗೊಳ್ಳಬೇಕು, ಇಲ್ಲದಿದ್ದರೆ ಆ ಲೋಕಸಭಾ ಕ್ಷೇತ್ರವನ್ನು ಪರಿಗಣಿಸದಂತೆ ಚುನಾವಣಾ ಆಯೋಗ ಕ್ರಮ ಕೈಗೊಳ್ಳಲಿ.

– ಬೂಕನಕೆರೆ ವಿಜೇಂದ್ರ, ಮೈಸೂರು

ತಾರತಮ್ಯ ಸಮಂಜಸವಲ್ಲ

ಸರಕಾರಿ ಸ್ವಾಮ್ಯದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ), ಹೊಸದಾಗಿ ನೇಮಕ ಮಾಡಿಕೊಳ್ಳಲಿರುವ ಸುಮಾರು 12 ಸಾವಿರ ಉದ್ಯೋಗಿಗಳ ಪೈಕಿ ಶೇ 85ರಷ್ಟು ಎಂಜಿನಿಯರಿಂಗ್ ಪದವೀಧರರಿಗೆ ಆದ್ಯತೆ ನೀಡಲು ನಿರ್ಧರಿಸಿದೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಇಷ್ಟು ದಿನ ಇಲ್ಲದಂತಹ ನಿಯಮವನ್ನು ಏಕೆ ಈಗ ತರುತ್ತಿದ್ದಾರೆ. ಬ್ಯಾಂಕಿಂಗ್ ಹುದ್ದೆಗಳ ಪರೀಕ್ಷೆಯನ್ನು ವಿಜ್ಞಾನ, ಕಲಾ ವಾಣಿಜ್ಯ ಹೀಗೆ ಯಾವ ವಿಭಾಗಗಳಲ್ಲಿಯಾದರೂ ಪದವಿ ಪಡೆದಿರುವವರಾದರು ಹುದ್ದೆ ಪಡೆಯಲು ಎಲ್ಲರಿಗೂ ಸಮಾನ ಅವಕಾಶ ನೀಡಲಾಗುತ್ತಿತ್ತು. ಈಗ ಈ ರೀತಿಯ ನಿಯಮ ಜಾರಿ ಮಾಡಿ ತಾರತಮ್ಯ ಮಾಡುವುದು ಸಮಂಜಸವಾದುದಲ್ಲ.

– ಅಂಬಿಕಾ ಬಿ.ಟಿ. ಹಾಸನ

ಓದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು